# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಸ.ಕಂ.ಅ(ಪು.ನ)/ಪಿಆರ್/01/20-21 ಸಹಾಯಕ ಕಂದಾಯ ಅಧಿಕಾರಿರವರ ಕಛೇರಿ,
(ಪುಲಿಕೇಶಿನಗರ)ಉಪವಿಭಾಗ, ಕ್ವೀನ್ಸ್ ರಸ್ತೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ : 15/05/2020

ದಿನಾಂಕ: 15/05/2020 ರಂದು ವಾರ್ಡ್-47 ರ ವಾರ್ಡ್ ಮಟ್ಟದ ವಿಪತ್ತು ನಿರ್ವಹಣಾ ಕೋಶದ (**Disaster Management Cell (DMC)**) ಸಭೆಯ ನಡುವಳಿಗಳು:-

ಸಭೆಗೆ ಹಾಜರಿದ್ದವರು:

1) R.Sampath Raj, Councilar, Ward No. 47, D.J.Halli, Bangalore, BBMP.
2) N.Krishnappa, ARO Pulikeshinagar sub division, BBMP.
3) Nagaraj.R., Tax Inspector, ARO Pulikeshinagar sub division, BBMP.
4) Ravi vaddar, Assistant Executive Engineer, Pulikeshinagar sub division, BBMP.
5) Nayanatara Patil, Medical Health Officer, Pulikeshinagar sub division, BBMP.
6) Doraiswamy, Assistant Executive Engineer (SWM), Pulikeshinagar sub division, BBMP.
7) Lokesh Narayana, Police Sub Inspector, D.J.Halli, Police Station, Bangalore.
8) Dr. Nishat Fatima, Doctor, Primary Health Center, Ward No. 47, D.J.Halli, Bangalore.
9) Prabhakar, Assistant Executive Engineer, BESCOM, C-5 Division, D.J.Halli, Bangalore.
10) Sandeep, Assistant Engineer, Electrical Division, BBMP, D.J.Halli, Bangalore.
11) Harinath, Assistant Executive Engineer, BWSSB, C-3 Division, D.J.Halli, Bangalore.
12) Rahul, Assistant Engineer, BWSSB, C-3 Division, D.J.Halli, Bangalore.
13) A.R. Suresh, President, Modi Garden, Residential Welfare Association, D.J.Halli, Ward No. 47, Bangalore.

ಸಭೆಯು ಪ್ರಾರಂಭಗೊಳ್ಳುತ್ತಿದ್ದಂತೆ ಅಧ್ಯಕ್ಷರಾದ ಶ್ರೀ.ಆರ್.ಸಂಪತ್‌ರಾಜ್ ರವರು ಪಾಲಿಕೆಯ ವಾರ್ಡ್-47-ಡಿ.ಜೆ.ಹಳ್ಳಿಯಲ್ಲಿ ರಚಿಸಲಾಗಿರುವ ವಾರ್ಡ್ ಮಟ್ಟದ ವಿಪತ್ತು ನಿರ್ವಹಣಾ ಕೋಶದ ಸಭೆಗೆ ಸದಸ್ಯರುರವರುಗಳನ್ನು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.

ಸಭೆಯಲ್ಲಿ ಈ ಕೆಳಕಂಡಂತೆ ಚರ್ಚಿಸಲಾಗಿದ್ದು,

- ಕೋವಿಡ್-19 ವೈರಸ್ ಹರಡಿಸಿರುವ ದೇಶಗಳಂದ ಬಂದಿರುವ ಅನಿವಾಸಿಗಳನ್ನು ಕ್ವಾರಂಟೈನ್‌ಗೆ ಒಳಪಡಿಸುವುದರ ಬಗ್ಗೆ ಚರ್ಚಿಸಿದ್ದು, ಅಧ್ಯಕ್ಷರು ಆರೋಗ್ಯ ಇಲಾಖೆಯ ಆರೋಗ್ಯ ಪರಿವೀಕ್ಷಕರಾದ ಶ್ರೀ.ಮುನಿನಂಜಪ್ಪ ರವರಿಗೆ ಪುಲಿಕೇಶಿನಗರ ವ್ಯಾಪ್ತಿಯಲ್ಲಿ ಬರುವ ಸರ್ವಿಸ್ ಅಪಾರ್ಟ್‌ಮೆಂಟ್‌ಗಳು, ಕಲ್ಯಾಣಮಂಟಪಗಳು ಹಾಗೂ ಹೋಟೆಲ್‌ಗಳನ್ನು ಗುರುತಿಸಿ ಪಟ್ಟಿ ನೀಡುವಂತೆ ತಿಳಿಸಿದರು ಹಾಗೂ ಆರೋಗ್ಯ ಅಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿ ರವರುಗಳು ವಾರ್ಡ್ 47 ರ ವ್ಯಾಪ್ತಿಯಲ್ಲಿ ಕೋವಿಡ್-19 ವೈರಸ್ ಹರಡಿಸಿರುವ ದೇಶಗಳಂದ ಬಂದಿರುವ ಅನಿವಾಸಿಗಳನ್ನು ಗುರುತಿಸಿ ಕ್ವಾರಂಟೈನ್ ಮಾಡಲು ತಿಳಿಸಿದರು.

- ಕೋವಿಡ್-19 ಕಂಟೈನ್ಮೆಂಟ್ ಜೋನ್ ಹಾಗೂ ಬಫರ್ ಜೋನ್ ನಿರ್ವಹಣೆಯಲ್ಲಿ ಸಹಕಾರ ನೀಡುವುದರ ಬಗ್ಗೆ ಚರ್ಚಿಸಲಾಯಿತು.

ಮು.ತಿ.ನೋ.

- ಪೋಲೀಸರ ಸಹಯೋಗದೊಂದಿಗೆ ಕನಿಷ್ಟ 1 ಮೀ. ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಕರ್ತವ್ಯಗಳಲ್ಲಿ ಯಾವುದೇ ಲೋಪದೋಷವಿಲ್ಲದೆ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸುವುದು ಹಾಗೂ ಈ ಬಗ್ಗೆ ಪ್ರತಿ ದಿನ ವರದಿ ಸಲ್ಲಿಸುವುದು ಹಾಗೂ ಶ್ರೀ.ಮುನಿನಂಪ್ಪ, ಆರೋಗ್ಯ ಪರಿವೀಕ್ಷಕರು ರವರಿಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಎರಡು ಆಟೋಗಳನ್ನು ಸಿದ್ಧಪಡಿಸಿ Announcement ಮಾಡಲು ಜಂಟಿ ಆಯುಕ್ತರು (ಪೂ) ರವರಿಗೆ ತಿಳಿಸಲು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು.

- ಎಲ್ಲಾ ಮಾರುಕಟ್ಟೆ ಸ್ಥಳಗಳು, ಅಂಗಡಿಗಳು, ಇಂದಿರಾ ಕ್ಯಾಂಟೀನ್‌ಗಳ ಮುಂದೆ ಬಣ್ಣದಲ್ಲಿ 1 ಮೀ. ಅಂತರದಲ್ಲಿ ಚೌಕಾಕಾರದ ಗುರುತುಗಳನ್ನು ಸಂಬಂಧಪಟ್ಟ ಅಭಿಯಂತರರುಗಳ ಸಹಕಾರ ಸಮನ್ವಯದೊಂದಿಗೆ ಮಾಡಲು ಕೂಡಲೇ ಕ್ರಮ ಕೈಗೊಳ್ಳುವಂತೆ ಚರ್ಚಿಸಲಾಗಿದ್ದು, ಹಾಗೂ ಈ ಬಗ್ಗೆ ಅಧ್ಯಕ್ಷರು ಪೇಂಟ್ ಹಾಗೂ ಪೇಂಟರ್‌ಗಳನ್ನು ನೀಡುವುದಾಗಿ ಅಧಿಕಾರಿಗಳಿಗೆ ತಿಳಿಸಲಾಯಿತು.

- ಕೋವಿಡ್-19 ರ ಬಿಬಿಎಂಪಿ ವಾರ್ಡ್-47 ಡಿ.ಜೆ.ಹಳ್ಳಿ ಸದಸ್ಯರ ಅನುದಾನದಲ್ಲಿ ರೂ. 20.00 ಲಕ್ಷವಿದ್ದು ಸುಮಾರು ರೂ. 15.00 ಲಕ್ಷದಲ್ಲಿ ಊಟದ ವ್ಯವಸ್ಥೆಗಾಗಿ ಹಾಗೂ ಇನ್ನು ಉಳಿದ ರೂ. 5.00 ಲಕ್ಷದಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು Announcement ಮಾಡಲು, ಮೋಟಾರು ಸೈಕಲ್‌ಗಳ ಬಳಕೆಗೆ ಹಾಗೂ ಟಿ ಶರ್ಟ್‌ಗಳನ್ನು ಖರೀದಿಸಲು ಬಳಸುವಂತೆ ತಿಳಿಸಿದ್ದು, ಶ್ರೀ.ಲೋಕೇಶ್, ಸಬ್‌ಇನ್ಸ್‌ಪೆಕ್ಟರ್ ರವರ ಸನಿಹದಲ್ಲಿ ಈ ಕಾರ್ಯಕ್ರಮಗಳನ್ನು ನಡೆಸಲು ತೀರ್ಮಾನಿಸಲಾಯಿತು. ಹಾಗೂ ವಾರ್ಡ್ 47 ರ ವ್ಯಾಪ್ತಿಯಲ್ಲಿ ಕೋವಿಡ್-19 ರ ಕ್ವಾರಂಟೈನ್ ಆದ ವ್ಯಕ್ತಿಗಳಿಗೆ ಊಟದ ವ್ಯವಸ್ಥೆ ಮಾಡಲು ಕೋವಿಡ್-19 ರ ಛೇರ್‌ಮನ್ ರಾದ ಶ್ರೀ.ಸುರೇಶ್‌ರವರನ್ನು ಸಂಪರ್ಕಿಸಲು ತಿಳಸಲಾಯಿತು.

- ವಾರ್ಡ್ 47 ರ ವ್ಯಾಪ್ತಿಯಲ್ಲಿ ಕೋವಿಡ್-19 ರ ಅಧ್ಯಕ್ಷರಾದ ಶ್ರೀ.ಸುರೇಶ್ ರವರಿಗೆ ಮೋಟಾರು ಸೈಕಲ್‌ಗಳು ಹಾಗೂ ಟಿ ಶರ್ಟ್‌ಗಳನ್ನು ನೀಡಿ ವಾರ್ಡ್ ವ್ಯಾಪ್ತಿಯಲ್ಲಿ Announcement ಮಾಡಲು ಚರ್ಚಿಸಲಾಯಿರು.

- ಸ್ಥಳೀಯ ಬೀದಿ ವ್ಯಾಪಾರಿಗಳನ್ನು ಹತ್ತಿರದ ಆಟದ ಮೈದಾನಕ್ಕೆ ಕೂಡಲೇ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವುದರ ಬಗ್ಗೆ ಚರ್ಚಿಸಿದ್ದು, ಈಗಾಗಲೇ ಬೀದಿ ವ್ಯಾಪಾರಿಗಳನ್ನು ಆಟದ ಮೈದಾನಕ್ಕೆ ಸ್ಥಳಾಂತರಿಸಿದ್ದು, ಆ ಜನಗಳಿಗೆ ಮಾಸ್ಕ್, ಸ್ಯಾನಿಟೈಸರ್ ನೀಡಿ ಕೋವಿಡ್-19 ಬಗ್ಗೆ ಜಾಗೃತಿ ಮೂಡಿಸಲು ಒಂದು ತಂಡವನ್ನು ರಚನೆ ಮಾಡುವುದಾಗಿ ತಿಳಿಸಿದರು.

- ಆರೋಗ್ಯ ಇಲಾಖೆಯಲ್ಲಿ ಬಿಪಿ, ಷುಗರ್ ಔಷಧಗಳು ಖಾಲಿಯಾಗಿದ್ದು ಇವುಗಳನ್ನು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಒದಗಿಸಿಕೊಡಬೇಕೆಂದು ತಿಳಿಸಿದರು.

- ವಲಸೆ ಕಾರ್ಮಿಕರ ಕುಟುಂಬ/ಕೊಳಚೆ ಪ್ರದೇಶದ ನಿವಾಸಿಗಳು, ಕಟ್ಟಡ ಕಾರ್ಮಿಕರಿಗೆ ಹಾಗೂ ಇತರೆ ಅಗತ್ಯವಿರುವ ನಿರ್ಗತಿಕರ ಜನರಿಗೆ ಊಟ ತಿಂಡಿ ಒದಗಿಸಲು ಹಾಗೂ ಸ್ಥಳೀಯ ಕಲ್ಯಾಣ ಮಂಟಪಗಳು ಹಾಗೂ ಹೋಟೆಲ್‌ಗಳಲ್ಲಿ ವಸತಿ ವ್ಯವಸ್ಥೆ ಮಾಡುವುದರ ಬಗ್ಗೆ ಚರ್ಚಿಸಿದ್ದು, ಈಗಾಗಲೇ ಕಳೆದ 40 ರಿಂದ 50 ದಿನಗಳಿಂದ ವಾರ್ಡ್-47 ರ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಊಟದ ವ್ಯವಸ್ಥೆ, ಆಹಾರ ಕಿಟ್‌ಗಳನ್ನು ಹಾಗೂ ಔಷಧಿಗಳನ್ನು ವಾರ್ಡ್ ವ್ಯಾಪ್ತಿಯಲ್ಲಿ ನೀಡಲಾಗುತ್ತಿದೆ ಎಂದು ಅಧ್ಯಕ್ಷರು ತಿಳಿಸಿದರು.

- ಸರ್ಕಾರೇತರ ಸಂಸ್ಥೆಗಳು ಹಾಗೂ ದಾನಿಗಳ ಸಹಯೋಗದೊಂದಿಗೆ ಅಗತ್ಯವಿರುವ ಊಟ, ಆಹಾರದ ಸಾಮಾಗ್ರಿಗಳು, ಮಾಸ್ಕ್, ಸ್ಯಾನಿಟೇಸರ್, ಹಣ್ಣು ತರಕಾರಿಗಳನ್ನು ಅಗತ್ಯವಿರುವವರಿಗೆ ದೊರಕಿಸಿಕೊಡುವಂತೆ ಸಭೆಯಲ್ಲಿ ಚರ್ಚಿಸಲಾಯಿತು.

- ವಾರ್ಡ್ ವ್ಯಾಪ್ತಿಯಲ್ಲಿ ಜನಸಂದಣಿ/ಗುಂಪು ಸೇರದಂತೆ ಕ್ರಮ ವಹಿಸುವುದರ ಬಗ್ಗೆ ಚರ್ಚಿಸಿದ್ದು, ಈ ಬಗ್ಗೆ ಜನರಲಲಿ ಜಾಗೃತಿ ಮೂಡಿಸುವುದರ ಬಗ್ಗೆ ತಿಳಸಲಾಯಿತು.

- ಸಮರ್ಪಕವಾಗಿ ತ್ಯಾಜ್ಯ ನಿರ್ವಹಣೆ/ಬಯೋಮೆಟಿಕ್ ವೇಸ್ಟ್ ನಿರ್ವಹಣೆ ಬಗ್ಗೆ ಚರ್ಚಿಸಿದ್ದು, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿರವರಿಗೆ ತಿಳಿಸಲಾಯಿತು.

- ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆ ಬಗ್ಗೆ ಚರ್ಚಿಸಿದ್ದು, ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ಮಾತನಾಡಿಸಿ ವಾರ್ಡ್ ವ್ಯಾಪ್ತಿಯಲ್ಲಿ ನೀರಿನ ವ್ಯವಸ್ಥೆ ಮಾಡಲು ವಾಟರ್ ಪ್ಲಾಂಟ್‌ನಿಂದ ನೀರನ್ನು ಉಚಿತವಾಗಿ ನೀಡಲು ತಿಳಿಸಿದರು.

- ಸೋಂಕು ನಿವಾರಕ ಔಷಧಿಗಳ ಸಿಂಪಡಣೆ ಬಗ್ಗೆ ಚರ್ಚಿಸಿದ್ದು, ಈಗಾಗಲೇ ಬಿಬಿಎಂಪಿ ವತಿಯಿಂದ ಔಷಧಿಗಳ ಸಿಂಪಡಣೆ ಮಾಡುತ್ತಿದ್ದು ಬಿಡಬ್ಲ್ಯೂಎಸ್‌ಎಸ್‌ಬಿ ರವರನ್ನು ಮಾಡನಾಡಿಸಿ ವಾರ್ಡ್ 47 ರ ವ್ಯಾಪ್ತಿಯಲ್ಲಿ ಎಷ್ಟು ಗಾಡಿಗಳು ಔಷಧಿಗಳ ಸಿಂಪಡಣೆ ಮಾಡುತ್ತಿರುವ ಬಗ್ಗೆ ಪಟ್ಟಿ ನೀಡಲು ತಿಳಿಸಿದರು.

- ಕಳೆದ 50 ದಿನಗಳಿಂದ ಶ್ರೀ.ಸುರೇಶ್ ರವರನ್ನು ಕೋವಿಡ್-19 ರ ಛೇರ್‌ಮನ್ ರನ್ನಾಗಿ ಅಧ್ಯಕ್ಷರು ನೇಮಿಸಿದ್ದು, Disaster Management Cell (DMC)) ಗೆ ಸದಸ್ಯರಾಗಿರುತ್ತಾರೆ. ಹಾಗೂ ಕೋವಿಡ್-19 ರ ಬಗ್ಗೆ ಪ್ರತಿ ಸೋಮವಾರ ಸಭೆ ಇರುವುದರಿಂದ ಆಯಾ ಅಧಿಕಾರಿರವರು ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ಮಾಡಿರುವುದರ ಬಗ್ಗೆ ಶ್ರೀ.ಸುರೇಶ್‌ರವರಿಗೆ ವರದಿ ನೀಡಲು ಸಭೆಯಲ್ಲಿ ತಿಳಿಸಿದರು.

- ಸರ್ಕಾರ ಹಾಗೂ ಬಿಬಿಎಂಪಿ ವತಿಯಿಂದ ಕೋವಿಡ್-19 ಸಂಬಂಧ ಜಾರಿಯಲ್ಲಿರುವ ಹಾಗೂ ಮುಂದೆ ನೀಡಬಹುದಾದ ಎಲ್ಲಾ ನಿಯಮಗಳನ್ನು ತಪ್ಪದೇ ಪಾಲಿಸಲು ಹಾಗೂ ಸೂಚನೆ ಹಾಗೂ ಆದೇಶಗಳನ್ನು ಮೀರದಂತೆ ಜಾಗರೂಕತೆಯಿಂದ ಪಾಲಿಸಬೇಕೆಂದು ಸಭೆಯಲ್ಲಿ ತಿಳಿಸಲಾಯಿತು.

ಸದಸ್ಯ ಕಾರ್ಯದರ್ಶಿ ವಾರ್ಡ್-47, ವಾರ್ಡ್ ಸಮಿತಿ
ಹಾಗೂ ಸಹಾಯಕ ಕಂದಾಯ ಅಧಿಕಾರಿ
ಪುಲಿಕೇಶಿನಗರ ಉಪ ವಿಭಾಗ, ಬಿಬಿಎಂಪಿ
Assistant Revenue Officer
Pulikeshinagar Sub Division
Bruhath Bengaluru Mahanagara Palike

(ಆರ್.ಸಂಪತ್‌ರಾಜ್)
ಅಧ್ಯಕ್ಷರು ಹಾಗೂ ಸದಸ್ಯರು
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ: 47

ಪ್ರತಿಯನ್ನು:

1. ಪೂಜ್ಯ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಪೂಜ್ಯ ಉಪ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
6. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
7. ಕಾರ್ಯದರ್ಶಿಗಳು, ಕೌನ್ಸಿಲ್ ಕಾರ್ಯಾಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
8. ವಾರ್ಡ್ ಸಮಿತಿಯ ಸದಸ್ಯರು. ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
9. ಕಂದಾಯ ಅಧಿಕಾರಿ (ಪುಲಕೇಶಿನಗರ), ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು(ಪುಲಿಕೇಶಿನಗರ) ಎಸ್‌ಡಬ್ಲ್ಯೂಎಂ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ, ರವರ ಅವಗಾಹನೆಗಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
13. ಸಹಾಯಕ ಅಭಿಯಂತರರು(ವಿದ್ಯುತ್/ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
14. ಕಛೇರಿ ಕಡತಕ್ಕೆ.